ಈ) ಈಗ ಇರತಕ್ಕಂತಹ ೭ ಕಾರ್ಮಿಕ ನ್ಯಾಯಾಲಯಗಳ ಹಾಗೂ ೩ ಔದ್ಯಮಿಕ ನ್ಯಾಯೋಧಿಕರಣಗಳ ಜೊತೆಗೆ ಹೊಸದಾಗಿ ೧ ಕಾರ್ಮಿಕ ನ್ಯಾಯಾಲಯ, ಚಿಕ್ಕಮಗಳೂರಿನಲ್ಲೂ ಹಾಗೂ ೧ ಔದ್ಯಮಿಕ ನ್ಯಾಯಾಧಿಕರಣ, ಮೈಸೂರಿನಲ್ಲೂ ಸ್ಥಾಪಿಸಲಾಗಿದೆ. ಇದರ ಜೊತೆಗೆ ಅಧ್ಯಕ್ಷಾಧಿಕಾರಿಗಳ ಸಭೆ ೧೧-೫-೮೮ರಂದು ಕರೆದು ಬಾಕಿ ಉಳಿದ ಮೂಕದ್ದಮೆಗಳನ್ನು ಆದಷ್ಟು ಜಾಗ್ರತೆ ಇತ್ಯರ್ಥ ಮಾಡಲು ತಿಳಿಸಲಾಗಿದೆ.

ರಾಜ್ಯದ ಒಳಗೆ ಹಾಗೂ ಹೊರಗೆ ಮಂಜೂರು ಮಾಡಿರುವ ಛತ್ರ ಹಾಗೂ ಪ್ರವಾಸಿ ಮಂದಿರಗಳು

೧೨೦೪. ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ (ಸಂಕೇಶ್ವರ).—ಮಾನ್ಯ ಕಂದಾಯ ಹಾಗೂ ಯೋಜನೆ ಮತ್ತು ಭಾರಿ ಹಾಗೂ ಮಧ್ಯಮ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಸೋಲಾಪುರ ಗಾನಗಾಪುರ ಪಂಡರಾಪುರ ತುಳಜಾಪುರ ಕೊಲ್ಲಾರಿಪುರ ದೇವಸ್ಥಾನದ ವ್ಯಾಪ್ತಿಗೆ ಕರ್ನಾಟಕ ಸರ್ಕಾರವು ಧರ್ಮ ಶಾಲೆಗಳನ್ನು, ಛತ್ರಗಳನ್ನು ಮಂಜೂರು ಮಾಡಿದ್ದು ನಿಜವೆ;

ಆ) ಪ್ರಶ್ನೆ ೧ರಲ್ಲಿ ನಮೂದಿಸಿರುವ ಸ್ಥಳಗಳನ್ನು ಬಿಟ್ಟು ಬೇರೆ ಯಾವ ರಾಜ್ಯಗಳಲ್ಲಿ ನಮ್ಮ ಛತ್ರಗಳು ಇರುತ್ತವೆ. ಹಾಗೂ ಸದ್ಯದಲ್ಲಿ ಹೊಸ ಛತ್ರಗಳನ್ನು ಮಂಜೂರು ಮಾಡಿರುವ ರಾಜ್ಯಗಳ ಹೆಸರೇನು;

ಇ) ಪ್ರಶ್ನೆ ಸಂಖ್ಯೆ: ೧ರಲ್ಲಿ ನಮೂದಿಸಿರುವ ಸ್ಥಳಗಳಲ್ಲಿ ಪ್ರತ್ಯೇಕವಾಗಿ ಎಷ್ಟು ಹಣ ಬಿಡುಗಡೆ ಮಾಡಲಾಗಿದೆ. ಕಟ್ಟಡಕ್ಕಾಗಿ ಹಾಗೂ ಇನ್ನುಳಿದ ಸೌಕರ್ಯಕ್ಕಾಗಿ ರಾಜ್ಯ ಸರ್ಕಾರ ಹಾಗೂ ಸಂಬಂಧಪಟ್ಟ ಹೊರ ರಾಜ್ಯ ಸರ್ಕಾರದ ಹಣಕಾಸಿನ ಸಹಾಯವೇನು ?

ಶ್ರೀ ಎಸ್. ಆರ್. ಬೊಮ್ಮಾಯಿ (ಕಂದಾಯ ಹಾಗೂ ಯೋಜನೆ ಮತ್ತು ಭಾರಿ ಹಾಗೂ ಮಧ್ಯಮ ನೀರಾವರಿ ಮಂತ್ರಿಗಳು).—

ಅ) ಇಲ್ಲ. ಸೋಲಾಪುರ ಪಂಡರಾಪುರ ಮತ್ತು ತುಳಜಾಪುರಗಳಲ್ಲಿ ಕರ್ನಾಟಕ ಸರ್ಕಾರವು ಛತ್ರಗಳನ್ನು ಧರ್ಮಶಾಲೆಗಳನ್ನು ಕಟ್ಟಲಂ ಪರಿಶೀಲಿಸುತ್ತಿದೆ.

ಆ) ಆಂಧ್ರಪ್ರದೇಶದ ತಿರುಪತಿ, ಶ್ರೀಶೈಲಂ ಮಂತ್ರಾಲಯಂ ಮತ್ತು ಉತ್ತರ ಪ್ರದೇಶದ ವಾರಣಾಸಿಯಲ್ಲಿ ನಮ್ಮ ರಾಜ್ಯದ ಛತ್ರಗಳು ಇದೆ. ಕೇರಳ ರಾಜ್ಯದ ಗುರುವಾಯೂರು ಎಂಬಲ್ಲಿ ರಾಜ್ಯ ಛತ್ರ ಕಟ್ಟಲು ೧೯೮೭-೮೮ರಲ್ಲಿ ರೂ. ೫.೦೦ ಲಕ್ಷ ಮಂಜೂರು ಮಾಡಲಾಗಿದೆ.

ಇ) ಈ ವಿಷಯಕ್ಕಾಗಿ ರಾಜ್ಯ ಸರ್ಕಾರವು ಯಾವುದೇ ಹಣ ಬಿಡುಗಡೆ ಮಾಡಿರುವುದಿಲ್ಲ. ಹೊರ ರಾಜ್ಯಗಳಿಂದಲೂ ಸಹ ಹಣಕಾಸಿನ ಸಹಾಯ ಪಡೆದಿಲ್ಲ.

ಉತ್ತರ ಕನ್ನಡ ಜಿಲ್ಲೆಯಲ್ಲಿ ಮನೆ ನಿವೇಶನ ಹಾಗೂ ಜಮೀನು ಮಂಜೂರಿ

೧೧೮೬. ಶ್ರೀ ಗೋಪಾಲ ಮುಕುಂದ ಕಾಸಡೆ (ಸಿರ್ಸಿ).—ಮಾನ್ಯ ಕಂದಾಯ ಹಾಗೂ ಯೋಜನೆ ಮತ್ತು ಭಾರಿ ಹಾಗೂ ಮಧ್ಯಮ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಉತ್ತರ ಕನ್ನಡ ಜಿಲ್ಲೆಯಲ್ಲಿ ಅತಿಕ್ರಮಣದಿಂದ ಜಮೀನುಗಳಲ್ಲಿ ನಿವೇಶನಗಳನ್ನಾಗಿ ಉಪಯೋಗಿಸುತ್ತಿರುವವರ ಸಂಖ್ಯೆ ಎಷ್ಟು.

ಆ) ಸಿರ್ಸಿ ಸಿದ್ದಾಪುರ ತಾಲ್ಲೂಕಂಗಳಲ್ಲಿ ಕಂದಾಯ (ಇಲಾಖೆಯ) ಭೂಮಿಯನ್ನು ಅತಿಕ್ರಮಿಸಿ ಮನೆಗಳನ್ನು ಕಟ್ಟಿರುವವರಿಗೆ ಸಕ್ರಮಗೊಳಿಸಲು ಸರ್ಕಾರದವರು ಕ್ರಮ ಕೈಗೊಳ್ಳುವರೆ.